# MAYA CARE FOUNDATION

**ವರದಿ ಪತ್ರಿಕೆ**

**Year: 2nd Issue: 4th**
**2026**

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

# ಕಾಳಜಿ, ಕರುಣೆ ಮತ್ತು ಸಮಾನ ಅವಕಾಶಗಳ ಸಬಲೀಕರಣ

## ಸಂಪಾದಕೀಯ

### ಹಿರಿಯರ ಆರೈಕೆ – ನಮ್ಮೆಲ್ಲರ ಸಾಮಾಜಿಕ ಹೊಣೆಗಾರಿಕೆ

"ಒಮ್ಮೆ ನಮ್ಮನ್ನು ಪ್ರೀತಿಯಿಂದ ಬೆಳೆಸಿದವರನ್ನು ಇಂದು ಪ್ರೀತಿಯಿಂದ ನೋಡಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ." ವಯಸ್ಸಿನ ಚಕ್ರ ನಿರಂತರವಾಗಿ ಸಾಗುತ್ತಿರುತ್ತದೆ. ಇಂದು ಯುವಕರಾಗಿರುವ ನಾವು ನಾಳೆ ಹಿರಿಯರಾಗುತ್ತೇವೆ. ಆದ್ದರಿಂದ ಹಿರಿಯರ ಗೌರವ, ಆರೈಕೆ ಮತ್ತು ಸುರಕ್ಷಿತ ಜೀವನವು ಕೇವಲ ಕುಟುಂಬದ ಜವಾಬ್ದಾರಿಯಲ್ಲ, ಇಡೀ ಸಮಾಜದ ಜವಾಬ್ದಾರಿಯಾಗಿದೆ.

ಮಾಯಾ ಕೇರ್ ಇದೇ ಮಾನವೀಯ ಮೌಲ್ಯವನ್ನು ತನ್ನ ಧ್ಯೇಯವನ್ನಾಗಿಸಿಕೊಂಡಿದೆ. ಏಕಾಂಗಿ ಹಿರಿಯರು ಮತ್ತು ವಿಕಲಚೇತನರಿಗೆ ಸ್ವಯಂಸೇವಕರನ್ನು ಸಂಪರ್ಕಿಸುವ ಮೂಲಕ ಅವರಿಗೆ ಅಗತ್ಯ ನೆರವು, ಆತ್ಮೀಯತೆ ಹಾಗೂ ಮಾನಸಿಕ ಬೆಂಬಲವನ್ನು ಒದಗಿಸುತ್ತಿದೆ. ಜೊತೆಗೆ, ವಿಕಲಚೇತನರನ್ನು ಸಮಾಜ ಸೇವೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸುವ ಮೂಲಕ ಒಳಗೊಳ್ಳುವಿಕೆ (Inclusion) ಎಂಬ ಮೌಲ್ಯವನ್ನು ಬಲಪಡಿಸುತ್ತಿದೆ. ಸಹಾನುಭೂತಿ, ಗೌರವ ಮತ್ತು ಸೇವಾ ಮನೋಭಾವದಿಂದ ಸಮಾಜವನ್ನು ಇನ್ನಷ್ಟು ಮಾನವೀಯವಾಗಿಸುವುದು ಮಾಯಾ ಕೇರ್‌ನ ಪ್ರಮುಖ ಉದ್ದೇಶವಾಗಿದೆ.

ಹಿರಿಯ ನಾಗರಿಕರ ಜೀವನಮಟ್ಟವನ್ನು ಉತ್ತಮಗೊಳಿಸಲು ಕರ್ನಾಟಕ ಸರ್ಕಾರ ಹಲವಾರು ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಿದೆ. ಆರ್ಥಿಕವಾಗಿ ಹಿಂದುಳಿದ ಹಿರಿಯರಿಗೆ ಸಂಧ್ಯಾ ಸುರಕ್ಷಾ ಯೋಜನೆ ಮೂಲಕ ಮಾಸಿಕ ಪಿಂಚಣಿ ನೀಡಲಾಗುತ್ತಿದೆ. ಹಿರಿಯ ನಾಗರಿಕರ ಗುರುತಿನ ಚೀಟಿ, ವಿವಿಧ ಸರ್ಕಾರಿ ಸೇವೆಗಳಿಗೆ ಸುಲಭ ಪ್ರವೇಶ, ಕಾನೂನು ರಕ್ಷಣೆ, ಆರೋಗ್ಯ ಸೇವೆಗಳ ಲಭ್ಯತೆ ಹಾಗೂ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆಯಡಿ ರಕ್ಷಣೆ ಸೇರಿದಂತೆ ಹಲವು ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದೆ. ಈ ಯೋಜನೆಗಳ ಉದ್ದೇಶ ಹಿರಿಯರು ಗೌರವಯುತ, ಸುರಕ್ಷಿತ ಹಾಗೂ ಸ್ವಾವಲಂಬಿ ಜೀವನ ನಡೆಸಲು ನೆರವಾಗುವುದಾಗಿದೆ.

ಸರ್ಕಾರದ ಯೋಜನೆಗಳು ಮತ್ತು ಸಮಾಜದ ಸೇವಾ ಮನೋಭಾವ ಒಂದಾಗಿದಾಗ ಮಾತ್ರ ಹಿರಿಯರು ಹಾಗೂ ವಿಕಲಚೇತನರಿಗೆ ನಿಜವಾದ ಭದ್ರತೆ ಮತ್ತು ಸಂತೋಷದ ಬದುಕು ಸಾಧ್ಯ. ಪ್ರತಿಯೊಬ್ಬರೂ ತಮ್ಮ ಸುತ್ತಮುತ್ತಲಿನ ಹಿರಿಯರೊಂದಿಗೆ ಸ್ವಲ್ಪ ಸಮಯ ಕಳೆಯುವುದು, ಅವರ ಅಗತ್ಯಗಳನ್ನು ಅರಿಯುವುದು ಮತ್ತು ಸಾಧ್ಯವಾದಷ್ಟು ನೆರವಾಗುವುದು ಸಮಾಜವನ್ನು ಮತ್ತಷ್ಟು ಕರುಣಾಮಯವಾಗಿಸುತ್ತದೆ.

"ಹಿರಿಯರನ್ನು ಗೌರವಿಸೋಣ – ಅವರ ಅನುಭವವನ್ನು ಸನ್ಮಾನಿಸೋಣ – ಸೇವೆಯ ಮೂಲಕ ಸಮಾಜವನ್ನು ಇನ್ನಷ್ಟು ಸುಂದರವಾಗಿಸೋಣ."

# ಫಲಾನುಭವಿಗಳಿಂದ ಪ್ರತಿಕ್ರಿಯೆ

**ಪೆರುಮಾಳ್, ಕೊಯಂಬತ್ತೂರು**.



ನಾನು ಪೆರುಮಾಳ್, ವಯಸ್ಸು 64, ರಾಮನಾಥಪುರಂ, ಕೊಯಂಬತ್ತೂರು. ಮಾಯಾ ಕೇರ್‌ನ ಸ್ವಯಂಸೇವಕಿ ಸಂಧ್ಯಾ ಅವರು ನನ್ನೊಂದಿಗೆ ಸಮಯ ಕಳೆಯುವುದು ಹಾಗೂ ಪತ್ರಿಕೆ ಓದಿ ಸುದ್ದಿಗಳನ್ನು ವಿವರಿಸುವ ಮೂಲಕ ಉತ್ತಮ ಸಹಾಯ ಮಾಡಿದ್ದಾರೆ. ಇದರಿಂದ ನನಗೆ ಸಂತೋಷ ಹಾಗೂ ಮಾನಸಿಕ ನೆಮ್ಮದಿ ದೊರೆತಿದೆ. ಅವರ ಸೇವೆ ಮತ್ತು ಕಾಳಜಿಗೆ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀ ಚರಣ ಹಿರಿಯರ ಆರೈಕೆ ಕೇಂದ್ರ , 8105704467 ಬೆಂಗಳೂರು**



ನಮ್ಮ ವೃದ್ಧಾಶ್ರಮದಲ್ಲಿ "ಹಿರಿಯರೊಂದಿಗೆ ಕಲಾ ಚಟುವಟಿಕೆ" (Art with Elderly) ಕಾರ್ಯಕ್ರಮವನ್ನು ಆಯೋಜಿಸಿದ ಮಾಯಾ ಕೇರ್, ಅದರ ಸ್ವಯಂಸೇವಕರಾದ ಸುಮನಾ ಮತ್ತು ಶೈಲಜಾ, ಹಾಗೂ J.P. Morgan ತಂಡಕ್ಕೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ಈ ಕಾರ್ಯಕ್ರಮವು ನಮ್ಮ ನಿವಾಸಿಗಳಿಗೆ ಸಂತೋಷ, ಸೃಜನಶೀಲತೆ ಹಾಗೂ ಅರ್ಥಪೂರ್ಣ ಸಮಯವನ್ನು ನೀಡಿತು. ಅವರು ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿ, ಸ್ವಯಂಸೇವಕರೊಂದಿಗೆ ಆತ್ಮೀಯವಾಗಿ ಬೆರೆತು ಉತ್ತಮ ಅನುಭವವನ್ನು ಪಡೆದರು. ಇಂತಹ ಕಾರ್ಯಕ್ರಮಗಳು ನಮ್ಮ ಹಿರಿಯರಲ್ಲಿ ಹೊಸ ಉತ್ಸಾಹ ಮತ್ತು ಆತ್ಮವಿಶ್ವಾಸವನ್ನು ಮೂಡಿಸುತ್ತವೆ.

*_*/_*_*_*_*_*_*_*_*_*_*_*_*/_*_*_*_*_*_*_*_*

**ಮುಂಬೈನ ಸವಿತಾ ಸುಬೇದಾರ್ – ಧೈರ್ಯ ಮತ್ತು ಸಾಧನೆಯ ಕಥೆ**



ಮುಂಬೈನ ಸವಿತಾ ಸುಬೇದಾರ್ ಅವರ ಜೀವನವು ಧೈರ್ಯ, ಆತ್ಮವಿಶ್ವಾಸ ಮತ್ತು ದೃಢ ಸಂಕಲ್ಪದ ಸ್ಫೂರ್ತಿದಾಯಕ ಉದಾಹರಣೆಯಾಗಿದೆ. ಮೂರನೇ ವಯಸ್ಸಿನಲ್ಲೇ ಪೋಲಿಯೊಗೆ ತುತ್ತಾದ ಅವರು, ಕುಟುಂಬದ ಸಂಕಷ್ಟಗಳನ್ನು ಧೈರ್ಯದಿಂದ ಎದುರಿಸಿ ಉತ್ತಮ ಭವಿಷ್ಯ ನಿರ್ಮಿಸುವ ಕನಸನ್ನು ಎಂದಿಗೂ ಕೈಬಿಡಲಿಲ್ಲ. ಮಾಯಾ ಕೇರ್ ಫೌಂಡೇಶನ್‌ನ "ಪ್ರಾಜೆಕ್ಟ್ ಬಿಂದು" ಮೂಲಕ ಸಂಸ್ಥೆಯನ್ನು ಸೇರಿದ ನಂತರ ಅವರ ಜೀವನದಲ್ಲಿ ಹೊಸ ತಿರುವು ಮೂಡಿತು. ಕಳೆದ ಮೂರು ವರ್ಷಗಳಲ್ಲಿ ಸ್ವಯಂಸೇವಕರೊಂದಿಗೆ ಸಂಪರ್ಕ ಸಾಧಿಸುವ ಜವಾಬ್ದಾರಿಯಿಂದ ಆರಂಭಿಸಿ, ಇಂದು ಮುಂಬೈ ಮತ್ತು ಬೆಂಗಳೂರು ನಗರಗಳ ಸಿಟಿ ಕೋಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಿರಿಯ ನಾಗರಿಕರ ಸಹಾಯವಾಣಿ ಕಾರ್ಯಗಳನ್ನು ಯಶಸ್ವಿಯಾಗಿ ಮುನ್ನಡೆಸುವುದರ ಜೊತೆಗೆ 150ಕ್ಕೂ ಹೆಚ್ಚು ಸ್ವಯಂಸೇವಕರನ್ನು ಸಮನ್ವಯಗೊಳಿಸಿದ್ದಾರೆ.

ಸವಿತಾ ಅವರ ಜೀವನಯಾನವು ದೃಢ ಸಂಕಲ್ಪ, ಪರಿಶ್ರಮ ಮತ್ತು ಸೇವಾ ಮನೋಭಾವ ಇದ್ದರೆ ಯಾವುದೇ ಸವಾಲನ್ನೂ ಜಯಿಸಿ ಸಮಾಜದಲ್ಲಿ ಸಾರ್ಥಕ ಬದಲಾವಣೆ ತರಬಹುದು ಎಂಬುದಕ್ಕೆ ಪ್ರೇರಣಾದಾಯಕ ಉದಾಹರಣೆಯಾಗಿದೆ

## ಮಾಯಾ ಕೇರ್‌ನ ಚಟುವಟಿಕೆಗಳು

1. ಅಭಯ ವೃದ್ಧಾಶ್ರಮ, ಹೈದರಾಬಾದ್ ತಂದೆಯರ ದಿನ ಮತ್ತು ವಿಶ್ವ ಸಂಗೀತ ದಿನದ ಅಂಗವಾಗಿ ವಿಶೇಷ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮಾಯಾ ಕೇರ್ ಸ್ವಯಂಸೇವಕಿ ಸೋನಾಲಿ ಕುಲಕರ್ಣಿ ಹಾಗೂ ಸಿಟಿ ಕೋಆರ್ಡಿನೇಟರ್ ಅನುರಾಧಾ ಅವರ ಸಹಯೋಗದಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

2. ಪ್ರಾವಿಡೆನ್ಸ್ ಹೋಮ್, ಸರ್ಜಾಪುರ ರಸ್ತೆ, ಬೆಂಗಳೂರು ನೆಟ್‌ಆಪ್ ಮತ್ತು ಮಾಯಾ ಕೇರ್ ಸ್ವಯಂಸೇವಕರು ಬಟ್ಟೆಯ ಚೀಲಗಳಿಗೆ ಬಣ್ಣ ಹಚ್ಚುವ (Cloth Bag Painting) ಸೃಜನಾತ್ಮಕ ಚಟುವಟಿಕೆಯನ್ನು ಆಯೋಜಿಸಿದರು.

3. ಅಕ್ಷಯ ಟ್ರಸ್ಟ್ ವೃದ್ಧಾಶ್ರಮ, ಚೆನ್ನೈಅಕ್ಷಯ ಟ್ರಸ್ಟ್ ವೃದ್ಧಾಶ್ರಮದಲ್ಲಿ ಮಾಯಾ ಕೇರ್ ಸ್ವಯಂಸೇವಕಿ ಮೇರಿ ಅವರು ಹಿರಿಯರಿಗಾಗಿ 'ಪಾಸ್ ದ ಬಾಲ್' ಹಾಗೂ ಒಗಟುಗಳ (Riddles) ಮನರಂಜನಾ ಚಟುವಟಿಕೆಗಳನ್ನು ಆಯೋಜಿಸಿದರು. ಈ ಕಾರ್ಯಕ್ರಮವು ಹಿರಿಯರಲ್ಲಿ ಉತ್ಸಾಹ, ನಗು ಮತ್ತು ಪರಸ್ಪರ ಸಂವಹನವನ್ನು ಹೆಚ್ಚಿಸಿತು.

| | |
|---|---|
| <br>ಬೆಂಗಳೂರುಜೆ.ಪಿ. ಮೋರ್ಗನ್ ಮತ್ತು ಮಾಯಾ ಕೇರ್ ಸ್ವಯಂಸೇವಕರಾದ ಸುಮನಾ ಹಾಗೂ ಶೈಲಜಾ ಅವರು ಹಿರಿಯರಿಗಾಗಿ "ಆರ್ಟ್ ವಿತ್ ದಿ ಎಲ್ಡರ್ಲಿ" ಚಟುವಟಿಕೆಯನ್ನು ಆಯೋಜಿಸಿದರು | <br>ಹೈದರಾಬಾದ್ - ಅಭಯ ವೃದ್ಧಾಶ್ರಮತಂದೆಯರ ದಿನ ಹಾಗೂ ಸಂಗೀತ ದಿನದ ಅಂಗವಾಗಿ ಮಾಯಾ ಕೇರ್ ಸ್ವಯಂಸೇವಕಿ ಸೋನಾಲಿ ಕುಲಕರ್ಣಿ ಅವರಿಂದ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಹಿರಿಯರು ಸಂತೋಷದಿಂದ ಭಾಗವಹಿಸಿ ಕಾರ್ಯಕ್ರಮವನ್ನು ಆನಂದಿಸಿದರು. |
| <br>ಕೊಯಂಬತ್ತೂರಿನಲ್ಲಿ, ಸ್ವಯಂಸೇವಕಿ ಮಹಿಮಾ ಅವರು 62 ವರ್ಷದ ಮಮತಾ ಅವರಿಗೆ ಅಗತ್ಯ ಔಷಧಿಗಳನ್ನು ತಲುಪಿಸಿ ನೆರವಾದರು. | <br>ನೆಟ್‌ಆಪ್ ಮತ್ತು ಮಾಯಾ ಕೇರ್ ಸ್ವಯಂಸೇವಕರು ಬಟ್ಟೆಯ ಚೀಲಗಳಿಗೆ ಬಣ್ಣ ಹಚ್ಚುವ (Cloth Bag Painting) ಸೃಜನಾತ್ಮಕ ಚಟುವಟಿಕೆಯನ್ನು ಆಯೋಜಿಸಿದರು. |

Year: 2nd Issue: 4th
ಜುಲೈ – ಸೆಪ್ಟೆಂಬರ್ 2026

Maya CARE Foundation
The next best thing to family

# MAYA CARE FOUNDATION

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

## ಮಾಯಾ ಕೇರ್ ರಾಷ್ಟ್ರೀಯ ಸಹಾಯವಾಣಿ: 1800 572 1343

| ಮಾಯಾ ಕೇರ್ ಭಾರತದ 72 ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. | FOR WHATSAPP |
|---|---|
| ದಕ್ಷಿಣ ಭಾರತದಲ್ಲಿ ಕೊಯಮತ್ತೂರು, ಚೆನ್ನೈ, ಪಾಂಡಿಚೇರಿ, ಹೈದರಾಬಾದ್, ಬೆಂಗಳೂರು, ಇದನ್ನು ಒಳಗೊಂಡಂತೆ ಭಾರತದ 72 ನಗರಗಳಲ್ಲಿ ಮತ್ತು ಯು. ಕೆ ಯ 4 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ | 9552510400/9552510411<br>8055995966 |

**ಕೆಳಗೆ ನೀಡಿರುವ ಹಿರಿಯ ನಾಗರಿಕರ ಉಚಿತ ಸೇವೆಗಳನ್ನು ವಿಶೇಷ ಚೇತನ ವೃತ್ತಿಪರರಿಂದ ಸಂಪೂರ್ಣವಾಗಿ ನಿರ್ವಹಿಸಲಾಗುತ್ತದೆ**

1. ಹಿರಿಯ ನಾಗರಿಕರಿಗೆ ಅವರ ಮನೆಯ ಹತ್ತಿರ ವಾಕಿಂಗ್ ಮಾಡಲು ಸಹಾಯ ಮಾಡುವುದು,ಪತ್ರಿಕೆಗಳು,ಧಾರ್ಮಿಕ ಪುಸ್ತಕ ಗಳನ್ನು ಓದುವುದು. ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, ವೈದ್ಯರನ್ನು ಭೇಟಿ ಮಾಡಿಸುವುದು, ಬ್ಯಾಂಕ್ ಕೆಲಸಗಳಿಗೆ ಸಹಾಯ ಮಾಡುವುದು, ಹಿರಿಯ ನಾಗರಿಕರನ್ನು ಬಸ್ /ರೈಲ್ವೆ /ವಿಮಾನ ನಿಲ್ದಾಣಗಳಿಗೆ ಕರೆದುಕೊಂಡು ಹೋಗವುದು, ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ICU ಹೊರಗೆ ರೋಗಿಯೊಂದಿಗೆ ಕುಳಿತುಕೊಳ್ಳುವುದು.ಬ್ಯಾಂಕ್‌ನಲ್ಲಿ ನಗದು/ಚೆಕ್‌ಗಳನ್ನು ಹಿಂಪಡೆಯಲು/ಠೇವಣಿ ಮಾಡಲು ಸಹಾಯ ಮಾಡುವುದು ಸ್ಮಾರ್ಟ್‌ಫೋನ್‌ಗಳ ಬಳಕೆ ಮತ್ತು ತಾಂತ್ರಿಕ ಸಹಾಯ ಮಾಡುವುದು

| Website - www.mayacare.org | Email : service@mayacare.org |
|---|---|

Merchant Name : MAYA CARE FOUNDATION
Mobile Number : 7721053535

Deduction under I-Tax Act is Available

NAME OF THE A/C - MAYA CARE FOUNDATION

NAME OF THE BANK : ICICI BANK LIMITED (BRANCH : TILAK ROAD,PUNE)
ACCOUNT NO. : 187501000462
IFSC CODE : ICIC0001875

**UPI ID: mayacarefoundation@icici**

**Book-Post**

| FROM: | TO: |
|---|---|
| **MAYA CARE FOUNDATION**<br>1214 Shukrawar Peth, Africa House, Subhash Nagar, Lane no.04,Pune-411002 | **Shree / Shrimati**<br>________________<br>______________<br>________________ |